

ಆಗಿ ಬಿಡುತ್ತಿತ್ತು. ಇದೆಲ್ಲಾ ತಂತಾನೆ ಆಗಿ ಬಿಡುತ್ತಿತ್ತು.

ಇದೆಲ್ಲದರಿಂದ ಹಿಂದ ಉಳದಿರೊ ಶಾಂತಿ ಕಣ್ತುಂಬ ಕಣ್ಣೀರ ತುಂಬಿಕೊಂಡು, ಗ್ವಾಡಿಗೆ ಆತ ಆಗಿ ನಿಂತಿದ್ದಳು. ಗೆಳತ್ಯಾರ ಸಂಗತಿ ತಾನೂ ಅಲ್ಲಿಕೇರಿಗೆ ಗೋಗುವ ತಯಾರಿಯೊಳಗ ಶಾಂತಿನೂ ಕೂಡ ಸಂಗವ್ವಕ್ಕ ತಿರುವಿಕೊಟ್ಟ ಸಜ್ಜಕವನ್ನೇ ಚಕಳಿಯಾಕಾರ ತುಣುಕು ಕತ್ತರಿಸಿಕೊಂಡು ಜರ್ಮನಿ ಟಬಕಾದೊಳಗ ತುಂಬಿಕೊಂಡು ದೊಡ್ಡ ಮನಿ ಸೌಕಾರ ಹುಡಿಗ್ಯಾರು ತೊಟ್ಟು ಬ್ಯಾಸರಾಗಿ ಕೊಟ್ಟಿರೊ ಚೈನಾಸಿಲ್ಕ್ ಅಂಬ್ರೆಲ್ಲಾ ಫ್ರಾಕು ಹಾಕೊಂಡು ನಿಂತಿದ್ಳು. ಪ್ರತಿ ದಿನದಂಗ ಶಾಂತಿಯನ್ನ ಹುಟ್ಟಿಸಿದ ಸಂಗಪ್ಪ ಅರ್ಥಾತ್ 'ಲಾಕ್ ಲೇಕ್ ಸಂಗಪ್ಪ' ಓಣಿ ತುಂಬಾ ಅಗಡಾ ದಿಗಡಿ ಹೆಜ್ಜಿ